ಅಧ್ಯಕ್ಷರು.—ಒಪ್ಪಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ಒಂದು ಕಾಲಿಂಗ್ ಅಟೆನ್‌ಷನ್ ಇದೆ. ಅದು ಕೂಡ ಬಹಳ ಪ್ರಾಮುಖ್ಯವಾದುದು, ಶ್ರೀಮತಿ ನಾಗರತ್ನಮ್ಮನವರು ಅದನ್ನು ಪ್ರಸ್ತಾಪ ಮಾಡುತ್ತಾರೆ.

ಅಧ್ಯಕ್ಷರು.—ಯಾವ ವಿಷಯ ಪ್ರಸ್ತಾಪ ಮಾಡುತ್ತಾರೆ, ನೋಟೀಸ್ ಕೊಟ್ಟಿಲ್ಲ.

ಶ್ರೀ ಎಚ್.ಡಿ. ದೇವೇಗೌಡ ಕಾಮಂಗಾರಿ ಸಚಿವರು ರಾಜೀನಾಮೆ ಕೊಟ್ಟಿರುವ ಬಗ್ಗೆ

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ರೂಲ್ ೧೬೭ರ ಪ್ರಕಾರ ಮಾತನಾಡುತ್ತೇನೆ. ನೋಟೀಸ್ ಕೊಟ್ಟಿಲ್ಲ. ಇವೊತ್ತಿನ ದಿವಸ ಪತ್ರಿಕೆಯಲ್ಲಿ ನಾವು ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳಾದ ಶ್ರೀಮಾನ್ ದೇವೇಗೌಡರ ರಾಜೀನಾಮೆಯ ವಿಚಾರದಲ್ಲಿ ಓದಿದೆವು. ಅದು ಓದಿದಾಗ ಅನೇಕ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಪತ್ರಿಕೆಗಳಲ್ಲಿ ಬರುವುದೆಲ್ಲಾ ಸಹಜವೆಂದು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು. ಅವರು ಹಾಗೆ ಹೇಳುವುದು ಸ್ವಾಭಾವಿಕ. ಇದು ಆದ ನಂತರ ನಿನ್ನೆ ಅದನ್ನು ಅವರೇ ಒಪ್ಪಿಕೊಂಡಿದ್ದಾರೆ. ದೇವೇಗೌಡರು ರಾಜೀನಾಮೆ ಕೊಟ್ಟಿರುವುದು ನಿಜ ಎಂದು. ಇದು ೪-೫ ದಿವಸಗಳಿಂದ ಪತ್ರಿಕೆಗಳಲ್ಲಿ ಬರುತ್ತಿತ್ತು. ಈ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ಇಲ್ಲಿ ಪ್ರಶ್ನೆ ಬಂದಾಗ, ಅದನ್ನು ಕೇಳಿದಾಗ ಇವರು ರಾಜೀನಾಮೆ ಕೊಟ್ಟಿಲ್ಲ, ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ನನ್ನನ್ನು ಬದಲು ಮಾಡಿ ಎಂದು ಕೇಳಿದ್ದಾರೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಜವಾಬು ಹೇಳಿ, ಈಗ ರಾಜೀನಾಮೆ ಕೊಟ್ಟಿರುವುದು ನಿಶ್ಚಿತ ಎಂದು ಕಾಣುತ್ತದೆ, ಏಕೆಂದರೆ ಅದನ್ನೂ ಗವರ್ನರ್ ಒಪ್ಪಿ ಕೊಂಡಿದ್ದಾರೆ.

ಅಧ್ಯಕ್ಷರು.—ಅವರ ಮಾತನ್ನು ಬಿಡಿ, ೧೬೭ ಏನು ಹೇಳುತ್ತದೆ ಎಂದರೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ಓದಿ ಅರ್ಥ ಮಾಡಿಕೊಳ್ಳುವಷ್ಟು ನನಗೆ ಇಂಗ್ಲೀಷ್ ಜ್ಞಾನವಿದೆ.

ಅಧ್ಯಕ್ಷರು.—ಅಲ್ಲಿ ' ಮೇ ' ಎಂದು ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—' ಮೇ ' ಎಂದು ಇದೆ, ' ಶಲ್ ' ಎಂದು ಇಲ್ಲ, ಅದಕ್ಕೆ ನಾನು ಕೇಳುತ್ತಾ ಇರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಈ ಹಿನ್ನೆಲೆಯಲ್ಲಿ ಪಾಯಿಂಟ್ ರೈಸ್ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಬರೀ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ನನ್ನನ್ನು ಬಿಡುಗಡೆ ಮಾಡಿ ಎಂದು ಅವರು ತಿಳಿಸಿದ್ದಾರೆಂದು ಹೇಳಿದ್ದಾರೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಬಹಳ ನಾಗಾ ಲೋಟದಿಂದ ಹೋಗುತ್ತಿದೆ ನಿಮ್ಮ ಡೆವಲಪ್‌ಮೆಂಟ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ದೇವೇಗೌಡರು ಮಂತ್ರಿ ತನದಿಂದಲೇ ರಾಜೀನಾಮೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದು ನಿನ್ನೆಯ ಮಾತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಅದು ಸ್ಪಷ್ಟವಾಗಿ ಗೊತ್ತಾಗಬೇಕು. ಈ ಸದನಕ್ಕೆ ತಿಳಿಯಬೇಕು, ಇವೊತ್ತಿನ ದಿವಸ ಅವರನ್ನು ರಿಲೀವ್ ಮಾಡಿದ್ದಾರೆ. ಕ್ಯಾಬಿನೆಟ್‌ಗೆ ರೆಸಿಗ್‌ನೇಷನ್ ಕೊಟ್ಟಿದ್ದಾರೆ. ಇದರ ಬಗ್ಗೆ ಸ್ಟೇಟ್‌ಮೆಂಟ್ ಕೂಡ ಬಂದಿದೆ. ಇನ್ನೊಂದು ಕಡೆ ನಮಗೆ ಏನು ಸಂಶಯ ಇತ್ತು ಎಂದರೆ, ಮಾನ್ಯ ಬಿ. ಬಿ ಶಿವಪ್ಪನವರು ಮಾನ್ಯ ದೇವೇಗೌಡರ ಮೇಲೆ ಆಪಾದನೆ ಮಾಡಿದಾಗ ಇದೇ ಮಾನ್ಯ ಮುಖ್ಯ ಮಂತ್ರಿಗಳು ಆ ಬಗ್ಗೆ ಮುಂದಿನ ತಿಂಗಳ ಎರಡನೇ ತಾರೀಖಿನೊಳಗಾಗಿ ಕ್ರಮ ತೆಗೆದುಕೊಳ್ಳುವುದಾಗಿ ಗಡುವು ಹಾಕಿದ್ದರು. ಆದ್ದರಿಂದ ಈ ಒಂದು ಕಾರಣಕ್ಕಾಗಿ ಅವರು ರಾಜೀನಾಮೆ ಕೊಟ್ಟಿದ್ದಾರೋ ಅಥವಾ ಬೇರೆ ಕಾರಣಕ್ಕೆ ಕೊಟ್ಟಿದ್ದಾರೋ ಎಂಬುದು ನಮಗೆ ಗೊತ್ತಿಲ್ಲ. ಅವರು ಯಾವ ಕಾರಣಕ್ಕೆ ಕೊಟ್ಟಿದ್ದಾರೆಂಬುದು ಈ ಸದನಕ್ಕೆ ಮತ್ತು

ಈ ರಾಜ್ಯದ ಜನತೆಗೆ ತಿಳಿಯಬೇಕು. ಆದ್ದರಿಂದ ಅವರು ಕಾರಣ ಕೊಟ್ಟರೆ ಉತ್ತಮವಾಗುತ್ತದೆ. ಮಾನ್ಯ ಬಿ. ಬಿ. ಶಿವಪ್ಪನವರು ಮಾಡಿದ ಆಪಾದನೆಗಳ ಮೇಲೆ ರಾಜೀನಾಮೆ ಕೊಟ್ಟಿದ್ದಾರೆಯೇ ಅಥವಾ ನೀರಾವರಿಗೆ ಸರ್ಕಾರ ಹೆಚ್ಚು ಹಣ ಒದಗಿಸಲಿಲ್ಲವೆಂಬ ಕಾರಣದಿಂದ ರೈತರ ಪರವಾಗಿ ರಾಜೀನಾಮೆ ಕೊಟ್ಟಿದ್ದಾರೆಯೇ ಎಂಬುದನ್ನು ತಿಳಿಸಬೇಕು. ಯಾವ ಕಾರಣಕ್ಕಾಗಿ ಕೊಟ್ಟರು ಎಂಬುದನ್ನು ಅವರು ಈ ಮಾನ್ಯ ಸಭೆಗೆ ತಿಳಿಸುವುದು ಒಳ್ಳೆಯದೆಂದು ತಮ್ಮ ಮುಖಾಂತರ ಅವರಿಗೆ ತಿಳಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಸೆಂಬ್ಲಿ ನಡೆಯುವಾಗ ಮಂತ್ರಿಗಳು ಯಾರಾದರೂ ರಾಜೀನಾಮೆ ಕೊಟ್ಟರೆ, ಆ ಬಗ್ಗೆ ಕಾರಣ ಕೊಡುವುದು ಒಂದು ಅಭ್ಯಾಸ, ಈ ಬಗ್ಗೆ ಅವರಿಗೆ ಇಷ್ಟ ಬಂದರೆ ಮಾತ್ರ ಹೇಳಿಕೆ ಕೊಡಬಹುದು, ಆದರೂ ಒಂದು ಹೇಳಿಕೆಯನ್ನು ಅವರು ಕೊಟ್ಟರೆ ಒಳ್ಳೆ ಚೆನ್ನಾಗಿರುತ್ತದೆ. ಆದ್ದರಿಂದ ತಾವು ದಯವಿಟ್ಟು ಅವರಿಗೆ ಈ ಬಗ್ಗೆ ವಿವರಣೆ ಕೊಡುವಂತೆ ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಈ ರಾಜೀನಾಮೆ ಪ್ರಸಂಗ ಈ ಅಸೆಂಬ್ಲಿ ನಡೆಯುತ್ತಿರುವಾಗ ಬಂದಿದೆ. ಇಲ್ಲದಿದ್ದರೆ, ಇದು ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆಯುತ್ತಿರಲಿಲ್ಲ. ಇದಕ್ಕಿಂತ ಪ್ರಾಮುಖ್ಯವಾಗಿ ಏನಾಗಿದೆ ಎಂದರೆ, ಈ ವಿಚಾರದಲ್ಲಿ ಪತ್ರಿಕೆಗಳಲ್ಲಿ ಬೇರೆ ಬೇರೆ ರೀತಿಯ ವಾದ ವಿವಾದಗಳು ಮತ್ತು ಊಹಾಪೋಹಗಳು ಬಂದಿವೆ. ಪತ್ರಿಕೆಗಳಲ್ಲಿ ಬಂದಿರುವುದನ್ನೆಲ್ಲಾ ನಂಬಬೇಡಿ ಎಂದು ನಮ್ಮ ಸಭಾನಾಯಕರು ನಮಗೆ ಹೇಳಿದ್ದರು ನಮ್ಮ ಸಭಾನಾಯಕರು ಪತ್ರಿಕಾ ವರದಿಯನ್ನು ಪೂರ್ತಿಯಾಗಿ ನಂಬಬಾರದು ಎಂದು ಹೇಳಿದರೂ ಸಹ ಈ ಪ್ರಕರಣದಲ್ಲಿ ಮಾತ್ರ ನಾವು ನಂಬಬೇಕಾಗುತ್ತದೆ. ಏಕೆಂದರೆ, ಮೊನ್ನೆ ತಾನೆ ಮುಖ್ಯ ಮಂತ್ರಿಗಳು ಈ ಬಗ್ಗೆ ಇಲ್ಲಿ ಹೇಳಿಕೆ ಕೊಡುವಾಗ ಮಾನ್ಯ ದೇವೇಗೌಡರು ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟಿಲ್ಲ, ತಮ್ಮನ್ನು ನೀರಾವರಿ ಖಾತೆಯಿಂದ ಬಿಡುಗಡೆ ಮಾಡಿ ಎಂದು ಕೇಳಿದ್ದಾರೆಂದೂ ಹೇಳಿದ್ದರು. ಪತ್ರಿಕೆಗಳಲ್ಲಿ ಶ್ರೀ ದೇವೇಗೌಡರ ರಾಜೀನಾಮೆ ಸುದ್ದಿ ಬಂದಿರುವುದು ಸರಿಯಲ್ಲ ಎಂದು ನಮಗೆ ನಂಬಿಕೆ ಬರುವಂತೆ ಆ ದಿನ ಹೇಳಿದ್ದರು. ಆದರೆ ಮಾನ್ಯ ದೇವೇಗೌಡರು ರಾಜೀನಾಮೆ ಕೊಟ್ಟಿದ್ದೇನೆಂದೂ ಹೇಳಿದ್ದಾರೆ. ಈ ಕಾರಣದಿಂದ ಈ ವಿಷಯ ಈ ಸದನದ ಪಸ್ತು ವಿತಕ್ಕೆ ಆಗುತ್ತಿದೆ ಎಂದರೆ, ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಈ ಸಭೆ ಇಲ್ಲಿ ಒಂದು ನಿರ್ಣಯವನ್ನು ಮಾಡಿತು. ಅದೇನೆಂದರೆ, ಅಪ್ಪರ್ ಕೃಷ್ಣಾ ಯೋಜನೆಗೆ ೨೦೦ ಕೋಟಿ ರೂಪಾಯಿಗಳನ್ನು ಮತ್ತು ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ನೂರು ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಬೇಕು, ಇಷ್ಟು ಹಣವನ್ನು ಸರ್ಕಾರ ಒದಗಿಸದಿದ್ದರೆ ಇಲ್ಲವೇ ಖರ್ಚು ಮಾಡಲು ಸಾಧ್ಯವಾಗದಿದ್ದರೆ ನಾನು ಒಂದು ಕ್ಷಣವೂ ಸಹ ಈ ಸ್ಥಾನದಲ್ಲಿರುವುದಿಲ್ಲವೆಂಬ ಸವಾಲನ್ನು ಅವರು ಹಾಕಿದ್ದರು. ಈಗ ನಾವು ೫೦ನೇ ಮಾರ್ಚಿನಲ್ಲಿದ್ದೇವೆ ನಿನ್ನೆ ತಾನೆ ೧೯೮೮–೮೯ನೇ ಸಾಲಿನ ಬಜೆಟ್ ಪಾಸಾಯಿತು. ಅವರು ಹೇಳಿದಷ್ಟು ಹಣವನ್ನು ಈ ಸಲವೂ ಸಹ ಒದಗಿಸಿಲ್ಲ. ಆದ್ದರಿಂದ ಅವರ ಒಂದು ಸವಾಲನ್ನು ಅನಿವಾರ್ಯವಾದಲ್ಲಿ ತರಲು ರಾಜೀನಾಮೆ ಕೊಟ್ಟಿದ್ದಾರೆಯೇ ಹೇಗೆ ಎಂಬುದು ನಮಗೆ ಅರ್ಥವಾಗಬೇಕು. ಪಂಜಾಬ್‌ನಲ್ಲಿ ವಾದ ಪತ್ರಿಕೆಗಳಲ್ಲಿ ಏನು ಬಂದಿದೆ ಎಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಇವರ ಮೇಲೆ ಸಿ. ಓ. ಡಿ. ತನಿಖೆಯನ್ನು ಮಾಡಿಸಿದ್ದಾರೆ.....

ಅಧ್ಯಕ್ಷರು.—ನೀವು ಇದಕ್ಕಿಂತ ಮುಂದಕ್ಕೆ ಹೋಗುವುದು ಬೇಡ.

ಶ್ರೀ ಎಂ. ವೀರಪ್ಪಮೊಯಿಲಿ.—ನಿಮ್ಮ ಮೇಲೆ ಕರಪ್ಷನ್ ಇರುವುದರಿಂದ ನೀವು ರಾಜೀನಾಮೆ ಕೊಡಬೇಕೆಂದು ಮುಖ್ಯ ಮಂತ್ರಿಗಳು ಇವರನ್ನು ಕೇಳಿದ್ದರಿಂದ ಕೊಟ್ಟಿದ್ದಾರೆಂಬ ವಾದ ಕೂಡ ಕೇಳಿ ಬರುತ್ತಿದೆ.

ಅಧ್ಯಕ್ಷರು.—ನೀವು ಒಂದು, ಎರಡು, ಮೂರು ನಾಲ್ಕು ಎಂದು ಅನೇಕ ವಿಷಯಗಳನ್ನು ಈಗ ಪ್ರಸ್ತಾಪ ಮಾಡುವುದು ಸರಿಯಲ್ಲ. ನೀವು ಏನಿದ್ದರೂ ನಮ್ಮ ರೂಲ್ಸ್ ಪ್ರಕಾರ ಮಾತನಾಡಬೇಕು, ಇಲ್ಲಿ ರೂಲ್ ಏನಿದೆ ಎಂದರೆ .....

ಶ್ರೀ ಎಂ. ವೀರಪ್ಪಮೊಯಿಲಿ.—ಇದಕ್ಕೆ ಸಂಬಂಧಪಟ್ಟ ರೂಲ್ ಇರುವುದು ನನಗೂ ಗೊತ್ತು, ನಾನು ಅದರ ಬಗ್ಗೆ ಈಗ ಮಾತನಾಡುತ್ತಿಲ್ಲ. ಇಲ್ಲಿ ರೂಲ್ಸ್ ಪ್ರಕಾರವೇ ಮಾತನಾಡಬೇಕೆಂಬುದೂ ಸಹ ನನಗೆ ಗೊತ್ತು. ನಾನು ಕಳೆದ ೧೫–೧೬ ವರ್ಷಗಳಿಂದಲೂ ರೂಲ್ಸ್ ನೋಡಿಕೊಂಡೇ

ಮಾತನಾಡುತ್ತಿದ್ದೇನೆ, ಈಗ ನಾವು ಇಲ್ಲಿ ಡಿಮ್ಯಾಂಡ್ ಮಾಡಂವುದು ಇಷ್ಟೆ ಸನ್ಮಾನ್ಯ ದೇವೇಗೌಡರು ಸದನದಲ್ಲಿಯೇ ಇರುವುದರಿಂದ ಅವರು ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿದ್ದಾರೆಂಬುದನ್ನು ಮಾನ್ಯ ಸಭೆಗೆ ತಿಳಿಸಬೇಕು. ಅಥವಾ ಉಹಾಪೋಹವು ಹರಡಿ ಬಿಡುತ್ತಿದೆ, ರಾಜೀನಾಮೆಯನ್ನು ಇವರು ಕೇಳಿ ಪಡೆದಿದ್ದಾರೆಯೇ ಅಥವಾ ಕೆಲವರು ಹೇಳುತ್ತಾರೆ, ಸಿಒಡಿ ರಿಪೋರ್ಟ್ ಅವರ ಕೈಯಲ್ಲಿದೆ, ನಿಮ್ಮನ್ನು ಹಿಚುಕಿ ಬಿಡುತ್ತಾರೆ ಎಂದು ಹೆದರಿ ನೀವು ರಾಜೀನಾಮೆ ಕೊಟ್ಟಿದ್ದೀರಿ ಎಂದು ಸಾರ್ವಜನಿಕ ಜೀವನದಲ್ಲಿ ತಾವೂ ಕೂಡ ಇರತಕ್ಕಂಥವರು, ನಾವೂ ಕೂಡ ಇರತಕ್ಕಂಥವರು, ಆದುದರಿಂದ ತಾವು ಪ್ರಾಮಾಣಿಕವಾಗಿ ಈ ಚಾರ್ಜಸ್‌ಗಳಿಗೆ ಬಾಧ್ಯರಲ್ಲದಿದ್ದರೆ He has to stand up, rise above and say that, I am the person who holds certain principles of integrity'. ಅದು ಇವೊತ್ತೇ ಗೊತ್ತಾಗಬೇಕು.

ಅಧ್ಯಕ್ಷರು.—ಇವತ್ತೇ ಗೊತ್ತಾಗಬೇಕು ಎಂದು ಏನೂ ಇಲ್ಲ

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ದೇವೇಗೌಡರು ೧೧ ಗಂಟೆಗೆ ಪ್ರೆಸ್ ಕಾನ್‌ಫರೆನ್ಸ್ ಕರೆದಿದ್ದರು, ಅದನ್ನು ಕ್ಯಾನ್ಸಲ್ ಮಾಡಿ ಇಲ್ಲಿ ಬಂದಿದ್ದಾರೆ.....

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ಮಾನ್ಯ ವೀರಪ್ಪನವರೇ ಕುಳಿತುಕೊಳ್ಳಿ ನಾನು ಹೇಳುತ್ತೇನೆ.

SRI M. VEERAPPA MOILY.—The chastity of the public man and his integrity should not be doubted even for a minute.

ಅಧ್ಯಕ್ಷರು.—ರಿಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ಮಾನ್ಯ ವೀರಪ್ಪನವರೇ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದರ ಬಗ್ಗೆ ನಮಗೆ ಹೇಳಿಕೆ ಕೊಡಬೇಕು. ಏಕೆಂದರೆ, ಇದು ಸನ್ಮಾನ್ಯ ದೇವೇಗೌಡರ ಪ್ರಶ್ನೆಯಲ್ಲ.....

ಅಧ್ಯಕ್ಷರು.—ಮಾಜಿ ಮಂತ್ರಿಗಳಾಗಿ ರೂಲ್ಸ್ ರೆಗ್ಯುಲೇಷನ್ಸ್ ಎಲ್ಲಾ ಗಾಳಿಗೆ ತೂರಿಬಿಟ್ಟು ಮಾತನಾಡುತ್ತೀರಿ ಅಂದರೆ ಏನು ಇದು ?

ಶ್ರೀ ಎಂ. ವೀರಪ್ಪಮೊಯಿಲಿ.—ಸಾರ್ವಜನಿಕವಾಗಿ ಪ್ರಾಮಾಣಿಕತೆಯ ಬಗ್ಗೆ ಇವತ್ತು ಸನ್ಮಾನ್ಯ ಮಂತ್ರಿಗಳು. ಕರಪ್ಷನ್ ಚಾರ್ಜಸ್ ಬಗ್ಗೆ ಹೆದರಿ ಓಡತಕ್ಕಂಥ ಅಥವಾ ರಾಜೀನಾಮೆ ಕೊಡತಕ್ಕಂಥ ಪ್ರಶ್ನೆ ಏನಿದೆ ಈ ಬಗ್ಗೆ ನಮಗೆ ಹೇಳಿಕೆ ಕೊಡಬೇಕು.

MR. SPEAKER.—It will not be recorded.

ಶ್ರೀ ಎಂ. ವೀರಪ್ಪ ಮೊಯಿಲಿ,—ಅವರು ರೆಸಿಗ್ನೇಷನ್‌ಗೆ ಡಿಮ್ಯಾಂಡ್ ಮಾಡಿದ್ದರೆ.

ಅಧ್ಯಕ್ಷರು.—ನೀವು ಏನು ಹೇಳಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇವರು ರಾಜಕೀಯ ಭಾಷಣ ಮಾಡುವುದಕ್ಕೆ ಹೊರಟ್ಟಿದ್ದಾರೆ. ಇವರಿಗೆ ರೂಲ್ಸ್ ರೆಗ್ಯುಲೇಷನ್ಸ್, ಕಾನೂನು ಏನೂ ಬೇಕಾಗಿಲ್ಲ ಅವರು ಹೇಳಿಂವು ದನ್ನು ಇಲ್ಲಿ ಹೇಳಿಬಿಡಬೇಕು. ವಾಂತಿ ಮಾಡಿಕೊಳ್ಳಿಪಷ್ಟು ಅವರು ವಿಷಯ ಕಾರುವುದಕ್ಕೆ ಹೊರಟ್ಟಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇವರು ಕೇಳುವುದಕ್ಕೆ ಸಿದ್ಧವಾಗಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ,—ವಾಂತಿ ಮಾಡಿಕೊಳ್ಳುವುದಕ್ಕೆ ಈ ಸಭೆ ಇರುವುದೇ ಅವರು ವಾಂತಿ ಮಾಡುವುದಕ್ಕೆ ಇಲ್ಲಿ ಅವಕಾಶ ಏಕೆ ಕೊಟ್ಟಿದ್ದೀರಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಶ್ರೀಮತಿ ನಾಗರತ್ನಮ್ಮನವರೂ ಮಾತನಾಡಿದ್ದಾರೆ ಅವರೂ ಮಾತನಾಡಿದ್ದಾರೆ. ನೀವೂ ಮಾತನಾಡಿದ್ದೀರಿ. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಹೇಳಲಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಇದು ರಾಜಕೀಯ ದುರ್ಲಾಭ ಪಡೆಯತಕ್ಕದ್ದು. ಈ ದುರ್ಲಾಭದಿಂದ ಅವರಿಗೆ ಪ್ರಯೋಜನವಾಗುವುದಿಲ್ಲ. ಈ ದುರ್ಬುದ್ಧಿ, ದುರ್ನಿಂದೆ, ದುಶ್ಚಟ ಇದರಿಂದ ಅವರಿಗೆ ಏನೂ ಪ್ರಯೋಜನವಾಗುವುದಿಲ್ಲ. ದಯವಿಟ್ಟು ರೂಲ್ ಪ್ರಕಾರ ನನ್ನ ಪಾಯಿಂಟ್ ಆಫ್ ಆರ್ಡರ್ ಕೇಳಿ.

ಅಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರ್ ಹೇಳುತ್ತಾರೆ. ರೂಲ್ ೧೬೭ ಕೆಳಗೆ ಏನಂ ಹೇಳುತ್ತದೆ ಅಂದರೆ...

ಶ್ರೀ ಎ ಲಕ್ಷ್ಮೀಸಾಗರ್.—ರೂಲ್ ೧೬೭ ಪ್ರಕಾರ ತಮ್ಮ ಅನುಮತಿ ಬೇಡಿ ರಾಜೀನಾಮೆ ಕೊಟ್ಟಿರತಕ್ಕಂಥ ಮಂತ್ರಿಗಳು ಈ ಸಭೆಯಲ್ಲಿ ಅವರ ಹೇಳಿಕೆಯನ್ನು ಹೇಳಬಹುದು, ಹೇಳಲೇಬೇಕು ಎಂದು ಇದರಲ್ಲಿ ಕಡ್ಡಾಯವಾದಂಥಾದ್ದು ಏನೂ ಇಲ್ಲ. ಇದು ಮೊದಲನೆಯದು ಎರಡನೆಯದು, ಅವರು ಈರೀತಿ ತಮ್ಮ ಹೇಳಿಕೆಯನ್ನು ಕೊಡಬೇಕು ಎಂದು ಇಚ್ಛಿಪಟ್ಟರೆ ಅವರು ಹೇಳಿಕೆಯನ್ನು ಕೊಡತಕ್ಕದ್ದರ ನಕಲನ್ನು ತಮಗೆ ಕಳಿಸಿಕೊಡಬೇಕು. ತಾವು ಆ ನಕಲನ್ನು ನೋಡಿ ಅದು ಸಾಧುವಾದುದು ಇದೆಯೋ ಅಸಾಧುವಾದುದು ಇದೆಯೋ, ಕಾನೂನಿಗೆ ವಿರುದ್ಧವಾಗಿದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡಿ ನಂತರ ತಾವು ನೋಡಿದ ನಕಲನ್ನು ಅವರು ಈ ಸಭೆಯಲ್ಲಿ ಹೇಳುವುದಕ್ಕೆ ಅವಕಾಶ ಕೊಡಬಹುದು ಕಾನೂನು ಪ್ರಕಾರ ರಾಜೀನಾಮೆ ಕೊಟ್ಟಿರತಕ್ಕಂಥ ಮಂತ್ರಿಗಳು ಹೇಳಿಕೆ ಕೊಡಬೇಕು, ಕೊಡಲೇಬೇಕು ಎಂದು ಬಲವಾತ್ಕಾರ ಮಾಡತಕ್ಕಂಥಾದ್ದಕ್ಕೆ ತಮಗೂ ಅಧಿಕಾರ ಇಲ್ಲ, ಈ ಸಭೆಗೂ ಅಧಿಕಾರ ಇಲ್ಲ, ಆದುದರಿಂದ ಇಷ್ಟನ್ನು ಅವರು ಕೇಳಬಹುದಾಗಿತ್ತು ಆದರೆ ಈ ಒಂದು ಅವಕಾಶವನ್ನು ದುರುಪಯೋಗ ಮಾಡಿಕೊಂಡು ರಾಜಕೀಯ ಲಾಭ ಪಡೆಯುವುದಕ್ಕೆ ಹೊರಟಿದ್ದಾರೆ ಮಾಹಾನ್ ನಾಯಕರು. ಇದರಿಂದ ಏನೂ ಪ್ರಯೋಜವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಈಗ ಈ ಕ್ರಿಯಾಲೋಪವನ್ನು ಎತ್ತಿಹಿಡಿದಿದ್ದೇನೆ. ಈಗ ತಮ್ಮದು ಕಾಲಿಂಗ್ ಅಟೆನ್‌ಷನ್ ಇದೆ ಕೇಳಿ.

(ಗೊಂದಲ)

MR. SPEAKER.—I will not allow anybody to speak.

ಶ್ರೀಮತಿ ಕೆ.ಎಸ್. ನಾಗರತ್ನ�ಮ್ಮ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ, ಅವರ ಕ್ರಿಯಾಲೋಪವನ್ನು ಎತ್ತಿಹಿಡಿದಿದ್ದೇನೆ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನನ್ನ ಹತ್ತಿರ ರೂಲ್ಸ್ ಇದೆ. ಈಗ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಎಷ್ಟು ಮಾತನಾಡುವುದು ಇದು ಶಾಂತಿ ಮಾಡುವ ಸ್ಥಳವೇ...

ಅಧ್ಯಕ್ಷರು.—ಆ ಮ್ಯಾಟರ್ ಕ್ಲೋಸ್ ಆಗಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಇಲ್ಲಿ ಹಾಸಿರುವ ಜಮಖಾನ, ಇದೆಲ್ಲಾ ಅಲ್ಲಾಡುತ್ತಿದೆ. ಸ್ವಾಮಿ, ಇವರು ನಿಂತಿರುವ ನೆಲವೇ ಅಲ್ಲಾಡುತ್ತಿದೆ. ದುರ್ಲಾಭ ನಮಗೆ ಏತಕ್ಕೆ ಬೇಕು ?

ಶ್ರೀ ಬಿ, ಬಸವಲಿಂಗಪ್ಪ.—ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಈ ಮನೆಯಲ್ಲಿ ಚರ್ಚೆಯಾದರೆ. ಈ ಮನೆಯ ಸಮಯ ದುರುಪಯೋಗವಾಗುತ್ತದೆಂದು ಹೇಳುತ್ತೇನೆ. ಏತಕ್ಕೆಂದರೆ, ಎಲ್ಲೂ ಯಾವ

ಕಾನೂನಿನಲ್ಲೂ ಕೂಡ ರಾಜೀನಾಮೆ ಕೊಟ್ಟಿರುವಂತ ಮಂತ್ರಿಗಳು ಸದನದಲ್ಲಿ ಒಂದು ಹೇಳಿಕೆ ಕೊಡಲೇ ಬೇಕು ಎನ್ನುವುದು ಇಲ್ಲ. ಕಳೆದ ೩ ವರ್ಷಗಳಲ್ಲಿ ಕೇಂದ್ರ ಸರ್ಕಾರದ ೫೦ ಜನ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ ಅವರು ಹೇಳಿಕೆ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಮುಖ್ಯಮಂತ್ರಿಗಳಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ದಯವಿಟ್ಟು ಎಲ್ಲರೂ ಕಂಳಿತುಕೊಳ್ಳಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ದೇವೇಗೌಡರ ವಿಚಾರದಲ್ಲಿ ತಪ್ಪು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಆಪಾದನೆಗಳು ಬಂದಿದ್ದಕ್ಕೆ ಕೊಟ್ಟಿದ್ದರೋ, ನೀರಾವರಿ ಬಾಬಿಗೆ ಹಣ ಕಡಿಮೆ ಕೊಟ್ಟಿದ್ದಾರೆಂದು ಕೊಟ್ಟರೋ, ಸಮಯ ಬಂದಾಗ ಏತಕ್ಕೆ ಕೊಟ್ಟರೊ ಎನ್ನುವುದರ ಬಗ್ಗೆ ಹೇಳಿಕೆ ಕೊಡಬೇಕಾಗಿತ್ತು. ಈಗಲೇ ಕೊಡಬೇಕು ಎಂದರೆ ಹೇಗೆ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ದೇವೇಗೌಡರ ಮೇಲೆ ಗೂಬೆ ಕೂರಿಸುವುದಕ್ಕೆ ಹೊರಟ್ಟಿದ್ದಾರೆ.

(ಗೊಂದಲ)

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳ ಪ್ರಕಾರ ನನಗೆ ಸೀಟು ಅಲಾಟ್ ಮಾಡಿದ್ದೀರೊ ಗೊತ್ತಿಲ್ಲ, ಇಲ್ಲಿ ಖಾಲಿ ಇದಕ್ಕೆ ಕುರ್ಚಿ ಇದ್ದುದರಿಂದ ಕುಳಿತಿದ್ದೇನೆ, ನನ್ನ ಅಭಿಪ್ರಾಯವನ್ನು ಹೇಳಲು ತಾವು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ರಾಜೀನಾಮೆ ಕೊಡಲಿಕ್ಕೆ ಏನು ಕಾರಣ ಎನ್ನುವುದರ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ. ಕರಪ್ಷನ್ ವಿಚಾರ ನೀರಾವರಿ ಇಲಾಖೆಗೆ ಹೆಚ್ಚು ಹಣ ಕೊಡದಿರುವ ವಿಚಾರ, ಪತ್ರಿಕೆಗಳಲ್ಲಿ ಲೋಕಾಯುಕ್ತ ಮತ್ತು ಸಿ.ಓ.ಡಿ. ಎನ್‌ಕ್ವೈರಿಗೆ ಹೆದರಿ ರಾಜೀನಾಮೆ ಕೊಟ್ಟಿದ್ದಾರೆಂದು ಕೆಲವು ಪತ್ರಿಕೆಗಳಲ್ಲಿ ಬರೆದಿದ್ದಾರೆ ನನ್ನ ಮೇಲೆ ಆಪಾದನೆ ಮಾಡಿರುವುದು ನೇರವಾಗಿ ಸ್ವಜನ ಪಕ್ಷಪಾತದ ಬಗ್ಗೆ ಚರ್ಚೆ ಬೇಡ. ನನ್ನ ಮೇಲಿನ ಆಪಾದನೆಗಳು ಹೈಕೋರ್ಟ್ ಮುಂದೆ ಲೋಕಯುಕ್ತದ ಮುಂದೆ ಸಿ.ಓ.ಡಿ. ಎನ್‌ಕ್ವೈರಿಯಲ್ಲಿ ಮತ್ತು ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇವೆ.

೧೧-೦೦ ಎ.ಎಂ.

ಆದರೆ ಇವೊತ್ತು ಇಷ್ಟುಮಾತ್ರ ಹೇಳಬಲ್ಲೆ, ಆಗಲೇ ಕಬಿನಿ ಪ್ರವಾಸಿ ಮಂದಿರದಲ್ಲಿ ಪತ್ರಿಕಾ ಕರ್ತರ ಜೊತೆ ಮಾತನಾಡುವಾಗ ವಿರೋಧಪಕ್ಷದ ನಾಯಕರಾದ ಶ್ರೀಮತಿ ನಾಗರತ್ನಮ್ಮ ಮಾನ್ಯ ಉಪ ನಾಯಕರಾದ ಮಲ್ಲಿಕಾರ್ಜುನ ಖಾರ್ಗೆಯವರು ನನ್ನ ರಾಜೀನಾಮೆ ಕೇಳಿದರು. ಶಿವಪ್ಪನವರ ಚಾರ್ಜ್ ಬಂದಮೇಲೆ ರಾಜೀನಾಮೆ ಕೊಡಿ ಎಂದು ಕೇಳಿದರು. ನಾನು ಆವೊತ್ತು ಹೇಳಿದೆ ಈ ವಿಷಯಕ್ಕೆ ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಿ. ಅದಕ್ಕೆ ಕೆಲವೊಂದು ಕಾರಣಗಳನ್ನು ಕೊಟ್ಟಿದ್ದೇನೆ. ಹೀಗೆ ಒಂದು ವರ್ಷ ದಿಂದ ನನ್ನಮೇಲೆ ಅವಿರತವಾಗಿ ನಡೆದುಕೊಂಡು ಬಂದಿದೆ ಪಿತೂರಿ ಆದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಿಲ್ಲ ಆದಕ್ಕೋಸ್ಕರ ನಾನು ರಾಜೀನಾಮೆ ಕೊಟ್ಟಿಲ್ಲ ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಪತ್ರಿಕೆಯಲ್ಲಿ ಬಂದಿರುವುದು ಇವೊತ್ತು ಇಲ್ಲಿ ನೀವು ಅದನ್ನು ಮತ್ತೊಂದು ಸಾರಿ ಎತ್ತಿ ಆದರ ಬಗ್ಗೆ ವಿವರಣೆ ಕೇಳಿದ್ದೀರಿ, ಅದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತೇನೆ. ನಾನು ರಾಜೀನಾಮೆ ಕೊಡಲಿಕ್ಕೆ ರತಕ್ಕಂಥದ್ದು ಇದಕ್ಕೂ ಸಂಬಂಧವಿಲ್ಲ ಅದು ಏನೇ ಬರಬಹುದು ಸಿ.ಬಿ.ಡಿ. ಎನ್‌ಕ್ವೈರಿ ಏನೇ ಬಹುದು, ಮುಂದೆ ಏನೇನು ಘಟನೆಗಳು ಜರುಗಬಹುದು ಅದರ ಬಗ್ಗೆ ಇವೊತ್ತು ವಿಶ್ಲೇಷಣೆ ಮಾಡಲಿಕ್ಕೆ ಸಿದ್ಧವಿಲ್ಲ. ಲೋಕಾಯುಕ್ತದಲ್ಲಿ ಏನು ಬರಂತ್ತದೆ ಎನ್ನುವ ಬಗ್ಗೆಯೂ ನನಗೆ ಯೋಚನೆ ಇಲ್ಲ. ನಾನು ರಾಜೀನಾಮೆ ಕೊಟ್ಟಿದುದ್ದು ಈ ಸದನದಲ್ಲಿ ಯಾವ ಒಂದು ನಿಲುವಿಗೋಸ್ಕರ ನಾನು ಪ್ರತಿ ಪಾದನೆ ಮಾಡಿಕೊಂಡು ಬಂದಿದ್ದೇನೆ ಆ ಸಂಬಂಧದಲ್ಲಿ ರಾಜೀನಾಮೆ ಕೊಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ನನ್ನನ್ನು ರಾಜೀನಾಮೆ ಕೊಡಿ ಎಂದು ಕೇಳಲಿಲ್ಲ. ಅದು ಅವರ ಸೌಜನ್ಯತೆ. ನಾನು ಇಷ್ಟು

ಮಾತ್ರ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಐದು ವರ್ಷ ನಾನು ಕರ್ನಾಟಕ ರಾಜ್ಯದ ನೀರಾವರಿ ಮಂತ್ರಿಯಾಗಿ ಶ್ರೀಮಾನ್ ಹೆಗಡೆಯವರ ನಾಯಕತ್ವದಲ್ಲಿ ಕೆಲಸಮಾಡಿಕೊಂಡು ಬರಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರು. ಈ ಸಂದರ್ಭದಲ್ಲಿ ಸದನದ ಎಲ್ಲಾ ಭಾಗದ ಜನತೆ ಈ ಕಡೆಯ ಸದಸ್ಯರು ಆ ಕಡೆಯ ಸದಸ್ಯರು ಇರಬಹುದು ಅವರು ಕೊಟ್ಟಂತಹ ಸಹಕಾರಕ್ಕೆ ನಾನು ಋಣಿಯಾಗಿದ್ದೇನೆ ಅದೇ ರೀತಿ ನನ್ನ ಇಲಾಖೆಯ ಎಲ್ಲಾ ಅಧಿಕಾರಿಗಳು ಕೊಟ್ಟಂಥ ಸಹಕಾರಕ್ಕೆ ನಾನು ಋಣಿಯಾಗಿದ್ದೇನೆ. ಈ ನಾಡಿನ ನಾಲ್ಕು ಕೋಟಿ ಜನರು ನಾನು ಯಾವುದೇ ಒಂದು ಸಭೆಗೆ ಹೋದಾಗ ಒಂದು ವರ್ಷದಲ್ಲಿ ಅವಿರತವಾಗಿ ಇಷ್ಟೆಲ್ಲಾ ಆಪಾದನೆಗಳು ನಡೆದುಕೊಂಡುಬಂದಿದ್ದರೂ ಇಂತಹ ಸನ್ನಿವೇಶದಲ್ಲೂ ಹಲವಾರು ಸಭೆಗಳಲ್ಲಿ ಭಾಗವಹಿಸಿದ್ದೇನೆ. ಯಾವುದೇ ಒಂದು ರೀತಿಯ ಚಕಾರ ಶಬ್ದವನ್ನು ಎತ್ತಿ ಅಗೌರವವಾಗಲಿ, ಪ್ರತಿಭಟನೆ ಯಾಗಲಿ ತೋರಿಸದೇ ಇದ್ದು ನಾನು ಈ ಇಲಾಖೆಯಲ್ಲಿ ಕೆಲಸ ಮಾಡಿಕೊಂಡು ಬರುವಂಥ ಸಂದರ್ಭದಲ್ಲಿ ಈ ನಾಡಿನ ನಾಲ್ಕು ಕೋಟಿ ಜನರು ಸಹಕಾರ ಕೊಟ್ಟಿದ್ದಾರೆ ಅವರಿಗೂ ನಾನು ಋಣಿಯಾಗಿದ್ದೇನೆ. ನನ್ನ ನಮಸ್ಕಾರಗಳು.

ಅಧ್ಯಕ್ಷರು.— ಈಗ ಮಾನ್ಯ ಮೊಯಿಲಿಯವರು, ಮತ್ತು ಶ್ರೀಮತಿ ನಾಗರತ್ನಮ್ಮನವರು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುವುದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಧ್ಯಕ್ಷರೆ, ಸಿ.ಬಿ.ಐ. ವಿಚಾರದ ಬಗ್ಗೆ ನಿನ್ನೆಯು ದಿವಸ ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೀರಿ...

(ಗೊಂದಲ)

ಅಧ್ಯಕ್ಷರು.— ಸಿ. ಬಿ. ಐ. ಎಂದು ನೀವು ಹೇಳಿದ್ದೀರಿ, ಹೌಸ್ ಕಮಿಟಿ ಎಂದು ಅವರು ಹೇಳಿದ್ದಾರೆ. ಕೆಲವರು ಪ್ರಿವಿಲೇಜ್ ಕಮಿಟಿ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ರೂಲಿಂಗ್ ಕೊಡುತ್ತೇನೆ ದಯಮಾಡಿ ಕುಳಿತುಕೊಳ್ಳಬೇಕು You cannot compel me to give my ruling. I have reserved my ruling. ಇವೊತ್ತು ಹೌಸ್ ಅಡ್ಜರ್ನ್ ಆಗುವುದರೊಳಗಾಗಿ ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಧ್ಯಕ್ಷರೆ, ಏಕೆಂದರೆ ಮಾನ್ಯ ಮಂತ್ರಿಗಳು ಚಾರ್ಜ್ ಶೀಟ್ ಮಾಡಿದ್ದಾರೆ ಆದ್ದರಿಂದ ಇಮ್ಮಿಡಿಯೆಟ್ ಆಗಿ ಸಿ.ಬಿ.ಐ ಗೆ ಇದನ್ನು ರೆಫರ್ ಮಾಡಬೇಕಾಗುತ್ತದೆ...

(ಗೊಂದಲ)

ಅಧ್ಯಕ್ಷರು.— ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು, ಇವೊತ್ತೇ ಹೌಸ್ ಅಡ್ಜರ್ನ್ ಆಗುವುದರೊಳಗೆ ರೂಲಿಂಗ್ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಬೇಕು ಮಾನ್ಯ ಖಾರ್ಗೆಯವರೆ, ತಾವು ಹೊಸಬರಲ್ಲ, ದಯಮಾಡಿ ಕುಳಿತುಕೊಳ್ಳಬೇಕು. ಈಗ ಗಮನ ಸೆಳೆಯುವ ಸೂಚನೆ.

ಶ್ರೀ ಜಿ. ಮಾದೇಗೌಡ.— ಅಧ್ಯಕ್ಷರೆ, ನಾನು ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೆ ಅದರ ಬಗ್ಗೆ ತಾವು ರೂಲಿಂಗ್ ಕೊಡಬೇಕಾಗುತ್ತದೆ.

ಅಧ್ಯಕ್ಷರು.— ತಾವು ಏನು ಪ್ರಿವಿಲೇಜ್ ನೋಟೀಸ್ ಕೊಟ್ಟಿದೀರಿ ಅದಕ್ಕೆ ನಾನು ರೂಲಿಂಗ್ ಕೊಡುತ್ತೇನೆ ದಯಮಾಡಿ ಸ್ವಲ್ಪ ಕುಳಿತುಕೊಳ್ಳಬೇಕು. ಈಗ ಗಮನ ಸೆಳೆಯುವಂಥ ಸೂಚನೆ ಮುಂಗಿದ ಮೇಲೆ ತಪ್ಪದು ತೆಗೆದುಕೊಳ್ಳುತ್ತೇನೆ.